# ಹೆಸರಿಲ್ಲದ ಒಂದು ಸ್ವಗತ...

ಅರ್ಧರಾತ್ರಿಯಲ್ಲಿ ಮನೆಯ ಬಾಗಿಲು ತಟ್ಟಿದರೆ ನನಗೋಸ್ಕರ ಅರೆನಿದ್ರೆಯಲ್ಲಿ ಕಾಯುತ್ತಿರುವ ನನ್ನಮ್ಮ ಬಾಗಿಲು ತೆರೆಯುತ್ತಾಳೆ. ನಿದ್ದೆಗಣ್ಣು-ಗಳಲ್ಲಿ ಆನಂದದ ಮಹಾಪೂರ, ಗೊತ್ತಿದ್ದರೂ ಕೇಳುತ್ತಾಳೆ, "ನಾಲ್ಕು ಗಂಟೆ ಬಸ್ಸಿಗೆ ಹೊರಟ್ಯಾ?" ರಾತ್ರಿ ನನಗೋಸ್ಕರ ಕರೆದಿಟ್ಟ ಹಪ್ಪಳ-ಸಂಡಿಗೆಊಟ, ಹಾಲು, ಈಗ ಬೇಡವೆಂದರೂ ಹಿತ್ತಿಲಲ್ಲಿ ಹಾಕಿದ ಹೊಸಬಾಳೇಮರದ ಹಣ್ಣು. ಊಟಮಾಡಿ ಹಾಸಿಗೆ ಮೇಲೆ ಉರುಳಿಕೊಂಡವನಿಗೆ ಹೊದಿಕೆ ಹೊದಿಸುತ್ತಾಳೆ, "ಕೆಲಸ ಹೇಗಿದೆ, ಸ್ನೇಹಿತ ಹೇಗಿದಾನೆ, ಆರೋಗ್ಯ ಚೆನ್ನಾಗಿದೆ ತಾನೆ?" ಅಮ್ಮನ ಪ್ರಶ್ನೆಗಳಿಗೆಲ್ಲ ನನ್ನ ನಿದ್ದೆಯ ಭಾರದ ಹೂಂಗುಟ್ಟುವಿಕೆಯ ಉತ್ತರ. "ಮಲಗು, ಬೆಳಿಗ್ಗೆ ಮಾತನಾಡೋಣ" ಎಂದು ದೀಪ ಆರಿಸುತ್ತಾಳೆ...

ಬೆಳಿಗ್ಗೆ ಲೇಟಾಗಿ ಎದ್ದವನಿಗೆ ವಿಶೇಷ ತಿಂಡಿ, ತಮ್ಮಂದಿರ ನಗು, ಕೇಕೆ. ತಿಂಡಿ ತಿಂದವನಿಗೆ ಬಿಸಿ ಬಿಸಿ ಹಾಲು, ತಲೆಗೆ ಎಣ್ಣೆ ಮಾಲೀಶು, ಬಯಲಲ್ಲಿ ಸ್ನೇಹಿತರೊಂದಿಗೆ ಆಟ, ಮೈ ಸುಡುವಷ್ಟು ಬಿಸಿನೀರಿನಲ್ಲಿ ಸ್ನಾನ, ಅಮ್ಮನ ಕೈ ತುತ್ತು. "ಸ್ವಲ್ಪ ಹೊತ್ತು ಮಲಗಿಕೋ" ಅನ್ನುವ ಅಮ್ಮನ ಪ್ರೀತಿಯ ನುಡಿ. ಮಲಗಿಕೊಂಡವನಿಗೆ ಕನಸು-ಕನವರಿಕೆಗಳಿಲ್ಲದ ಗಾಢ ನಿದ್ರೆ. ನಿದ್ರೆಬಿಟ್ಟೆದ್ದರೆ, ಅಲ್ಲೇ ಕುಳಿತಿರುವ ಅಮ್ಮ, "ಸರಿಯಾಗಿ ನಿದ್ದೆ ಬಂತೇನೋ?" ಅಂತಾಳೆ. ನನ್ನ ಕಣ್ಣುಗಳಿನ್ನೂ ಹಿತವಾಗಿ ಚುಚ್ಚುತ್ತಿವೆ, ಕಣ್ಣುಗಳನೆಲ್ಲ ಒತ್ತಿ ಸವರಿ, ತೋಳುಗಳನೆಲ್ಲ ಹಿತವಾಗಿ ಅದುಮುತ್ತಾ, ಕೇಳುತ್ತಾಳೆ, "ಸಣ್ಣಗಾಗಿದೀಯಾ, ಸರಿಯಾಗಿ ಊಟ ಮಾಡೋಲ್ವಾ? ದಿನಾ ಮಲ್ಗೋದು ಲೇಟಾ?" ಮೆಲ್ಲನೆ ಮನಸಿನಲ್ಲಿನ ಮಾತುಗಳೆಲ್ಲ ಹೊರಬರುತ್ತವೆ, "ಸ್ನೇಹಿತನಿಗೆ ಸಿಕ್ಕ ಪ್ರೊಮೋಶನ್, ನಾನು ಬೇರೆಕೆಲಸ ಹುಡುಕುತ್ತಿರುವುದು, ಕೆಲಸದ ಒತ್ತಡ, ಸೀನಿಯರ್ಸ್‌ಗಳ ಕಿರಿಕಿರಿ, ಹೋದವಾರ ಬಂದಿದ್ದ ಒಣಕೆಮ್ಮು,...", ಇವುಗಳ ಜೊತೆಗೆ ಅಮ್ಮ ಹೇಳುವ ಊರಿನ ವಿಷಯಗಳು "ಮಳೆಯಾಗಿಲ್ಲ, ನಾರಾಯಣಭಟ್ಟರ ಮಗಳು ಓಡಿಹೊದದ್ದು, ಗಂಗೆ ಹಸು ಕರು ಹಾಕಿದ್ದು, ಅವರೇ ಗಿಡ ಹೂವಾಗಿದ್ದು, ದೀಪೋತ್ಸವದಲ್ಲಿ ನಡೆದ ಗಲಾಟೆ, ಊರಿಗೆ ಬಂದ ಹೊಸ ಡಾಕ್ಟರು.."

"ಮಲ್ಗಿರು, ಕಾಫ಼ಿ ತರ್ತೀನಿ", ಅಂತ ಹೋದವಳು, ಅವಲಕ್ಕಿ ಮಾಡಿ ದೊಡ್ಡಲೋಟದ ತುಂಬ ಕಾಫ಼ಿ ತರುತ್ತಾಳೆ. ಹಾಸಿಗೆಯಲ್ಲೇ ಕುಳಿತು ತಿನ್ನುತಿದ್ದವನನ್ನು ತಮ್ಮಂದಿರು ಮುತ್ತಿಕೊಳ್ಳುತ್ತಾರೆ, ಮತ್ತದೇ ಮಾತು, ನಗು, ಕೇಕೆ... ಸ್ನೇಹಿತರೊಂದಿಗೆ ವಾಕಿಂಗ್ ಹೊರಟವನನ್ನು ಅಮ್ಮ ಕೂಗುತ್ತಾಳೆ, "ಬೇಗ ಬಂದ್ಬಿಡಿ". ಸ್ನೇಹಿತರೊಂದಿಗೆ ಮಾತು, ಕೆರೆಯಗುಂಟ ನಡಿಗೆ, ‘ಅವನ ಭಗ್ನಪ್ರೇಮ, ಇವನು ಪೋಲಿಸ್ ಹುದ್ದೆಗೆ ಸೆಲೆಕ್ಟ್ ಆದದ್ದು, ಡಂಪಿ ಬರೋವರುಷ ಫ಼ಾರಿನ್ನಿಗೆ ಹೋಗುತ್ತಿರುವುದು, ಬೆಂಗಳೂರಿನ ಹುಡುಗಿಯರು, ಆಫ಼ೀಸಿನ ಸ್ನೇಹಿತರು, ಟ್ರಾಫ಼ಿಕ್ಕು, ಧೂಳು, ಸಿನಿಮಾ...’

ಕತ್ತಲು ಕವಿಸಿಕೊಂಡು ಮನೆಗೆ ಬಂದರೆ ಮನೆಯೆಲ್ಲಾ ಏಲಕ್ಕಿ ಘಮ, ಸ್ನೇಹಿತರಿಗೂ ಶಾವಿಗೆ ಊಟದ ಆಮಂತ್ರಣ! ಅಡುಗೆ ತಯಾರಾಗುವ ತನಕ ನಮ್ಮ ಚೆನ್ನಮಣೆ ಆಟ, ರೇಡಿಯೋದಲ್ಲಿ ಬರುತ್ತಿರುವ ಕ್ರಿಕೆಟ್ ಸ್ಕೋರಿನ ವಿವರ, ಆಸರೆಗೆ ಬಿಸಿ ಬಿಸಿ ಕಾಫ಼ಿ, ಹರಟೆ, ನಗು. ಸಾಲಾಗಿ ಕುಳಿತ ಮಕ್ಕಳಿಗೆಲ್ಲ ಬಡಿಸಿ ಉಪಚರಿಸುವ ಅನ್ನಪೂರ್ಣೆ ನನ್ನಮ್ಮ, ಮೆಲ್ಲನೇ ಮಾತು ತೆಗೆಯುತ್ತಾಳೆ, "ಯಾವಾಗ ನಿಮ್ಮೆಲ್ಲರ ಮದುವೆ? ನನಗೂ ಕತ್ತೆಚಾಕರಿ ಮಾಡಿ ಸಾಕಾಯ್ತು, ಇವನಿಗಾದರೂ ಹೇಳಿ" ಎಲ್ಲರ ಹುಸಿನಗು, ಹಿಡಿದಿಡಲಾಗದ ನನ್ನ ಗಾಂಭೀರ್ಯ...

ಊಟಮಾಡಿ ಮಾಡಿನ ಜಗುಲಿಯಲ್ಲಿ ಕುಳಿತವರಿಗೆ ಹಾಲು, ಬಾಳೇಹಣ್ಣು, ಹಾಲಿನ ಬಟ್ಟಲಲಿ ದೂರದಾಗಸದಲ್ಲಿ ನಗುತ್ತಿರುವ ಚಂದಿರನ ಬಿಂಬ, ಎಳೆಯುತ್ತಿರುವ ಕಣ್ಣೆವೆಗಳು... ಸ್ನೇಹಿತರೆಲ್ಲ ಒಬ್ಬೊಬ್ಬರಾಗಿ ಹೊರಟುಹೋಗುತ್ತಾರೆ, ನಾನೇ ಹಾಸಿಕೊಳ್ಳುವೆನೆಂದರೂ ಬಿಡದೇ ಹಾಸುತ್ತಾಳೆ, ರಾತ್ರಿ ಗಮನಿಸದವನು ಈಗ ಕೇಳುತ್ತೇನೆ, "ಇದ್ಯಾವುದು ಹೊಸ ಹೊದಿಕೆ? ಯಾವಾಗ ಹೊಲಿದೆ?" ಅದಕುತ್ತರಿಸಿ ಅಮ್ಮ ಗೊತ್ತಿದ್ದೂ ಕೇಳುತ್ತಾಳೆ, "ಬೆಳಿಗ್ಗೆ ಹೊರಡಬೇಕಾ?" ಹೂಂ ಎಂದು ಮಗ್ಗುಲುಬದಲಿಸಿದವನಿಗೆ "ಮಲಕ್ಕೊ ಬೆಳಿಗ್ಗೆ ಬೇಗ ಎಬ್ಬಿಸುತ್ತೇನೆ" ಅಂತ ಹೊದಿಕೆ ಹೊದೆಸುತ್ತಾಳೆ. ಅಡುಗೆಮನೆಯಲ್ಲಿ ಸದ್ದು, ‘ನನಗೋಸ್ಕರ ಬೆಳಿಗ್ಗೆ ತಿಂಡಿಗೆ ಅವರೆಕಾಳು ನೆನೆಹಾಕುತ್ತಿದ್ದಾಳೆ, ಬಹುಶ: ಬೆಳಗಿನ ನನ್ನ ಕಾಫ಼ಿಗೆ ಹಾಲು ಉಳಿದಿದೆಯಾ? ನೋಡುತ್ತಿದ್ದಾಳೆ, ಜೊತೆಗೆ ಹಿತ್ತಲಿನ ಹೊಸ ಬಾಳೇಹಣ್ಣಿನ ಪೊಟ್ಟಣ ಕಟ್ಟುತಿದ್ದಾಳೆ,’ ನಾನು ನಾಳೆಯನ್ನು ಶಪಿಸಿಕೊಂಡು ನಿದ್ರೆಗೆ ಜಾರುತ್ತೇನೆ...